ಫೋನ್ ಉಪಯೋಗ ಮಾಡುತ್ತಾರೆ. ಅದರ ರಿಸ್ಟ್ರಿಕ್ಷನ್ ಬಗ್ಗೆ ತಾವು ನಮೂದು ಮಾಡಿದ್ದೀರಿ. ಇದು ಸ್ವಾಗತ ಇವತ್ತು ಯಾರು ಎಲ್ಲಿಂದ ದೂರವಾಣಿ ಮಾಡುತ್ತಾರೆ ಎಂಬುದು ಯಾರಿಗೂ ಗೊತ್ತಾಗುವುದಿಲ್ಲ. ಆದ್ದರಿಂದ ಇದನ್ನು ನೂರಕ್ಕೆ ನೂರು ಭಾಗ ಸ್ವಾಗತ ಮಾಡಲೇಬೇಕು. ಆದ್ದರಿಂದ ಮಧ್ಯಾಹ್ನ ಇದರ ಬಗ್ಗೆ ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು. ಅಷ್ಟರಲ್ಲಿ ನಾವು ಇದರ ಬಗ್ಗೆ ಸ್ವಲ್ಪ ಅಧ್ಯಾಯನ ಮಾಡಲು ಸಾಧ್ಯವಾಗುತ್ತದೆ. ಖಂಡಿತವಾಗಿ ನಾವು ಇದನ್ನು ಪಾಸ್ ಮಾಡಿಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಕ್ರೈಮ್ ಮಾಡತಕ್ಕವನು, ಟೆಲಿಫೋನ್ ಟ್ರಾಪ್ ಮಾಡತಕ್ಕವನು ಇವರ ಬಗ್ಗೆ ಕ್ರಮ ತೆಗೆದುಕೊಳ್ಳುವ ಸಲುವಾಗಿಯೇ ಇದು ಭಾರತ ಸರ್ಕಾರಕ್ಕೆ ಹೋಗಬೇಕಾಗಿದೆ. ತಾವು ಇದನ್ನು ಪಾಸ್ ಮಾಡಿಕೊಟ್ಟರೂ ಭಾರತ ಸರ್ಕಾರಕ್ಕೆ ಹೋಗಿ ಅಪ್ರೂವಲ್ ಆಗಿ ಬರಬೇಕಾಗುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಆ ಸೌಲಭ್ಯ ಇಲ್ಲದಿದ್ದರೆ ಕ್ರಿಕೆಟ್ ಮ್ಯಾಚ್ ಫಿಕ್ಸಿಂಗ್ ಗೊತ್ತಾಗುತ್ತಲೇ ಇರಲಿಲ್ಲ , ಚರ್ಚೆಗಳ ಸ್ಪೋಟ ಮಾಡಿದ ವ್ಯಕ್ತಿಗಳನ್ನು ಇದರಿಂದಲೇ ಹಿಡಿಯಲು ಸಾಧ್ಯವಾಯಿತು. ಆದರೆ ಕೆಲವು ಪ್ರಾವಿಜನ್‌ಗಳನ್ನು ನಾವು ನೋಡುವುದಕೋಸ್ಕರ ಅರ್ಧ ಗಂಟೆ ಅವಕಾಶ ಕೊಡಿ ನಾವು ಪರಿಶೀಲನೆ ಮಾಡುತ್ತೇವೆ. ಊಟದ ನಂತರ ಬೇಕಾದರೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಇದ್ದಾರೆ. ಚಿತ್ರದುರ್ಗದಲ್ಲಿ ಹರಿಜನ ಹೆಣ್ಣುಮಗಳ ಮೇಲೆ ಅತ್ಯಾಚಾರವಾಗಿರುವ ಬಗ್ಗೆ ಹೇಳಿಕೆ ಕೊಡುವುದಾಗಿ ಹೇಳಿದ್ದರು. ಮೂರು ದಿವಸಗಳಿಂದ ಹೇಳಿಕೆ ಕೊಡಲು ಆಗಿಲ್ಲ. ಆದ್ದರಿಂದ ಮೊದಲು ಹೇಳಿಕೆಯನ್ನು ಕೊಡಲಿ. ಆನಂತರ ಮಾನ್ಯ ಶ್ರೀಕಂಠಯ್ಯನವರ ಬಿಲ್ಲನ್ನು ತೆಗೆದುಕೊಳ್ಳಿ.

(ಆ) ಕರ್ನಾಟಕ ಬಾಡಿಗೆ ವಿಧೇಯಕ, 1999

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ "1999ರ ಕರ್ನಾಟಕ ಬಾಡಿಗೆ ವಿಧೇಯಕವನ್ನು" ಪರ್ಯಾಲೋಪಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಜಗದೀಶ್‌ಶೆಟ್ಟರ್ (ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, 1961ರ ಬಾಡಿಗೆ ನಿಯಂತ್ರಣ ಆಕ್ಟ್ ಏನಿತ್ತೋ ಅದಕ್ಕೆ ಪೂರಕವಾಗಿ ಹೊಸದಾಗಿ ಈ ಆಕ್ಟ್‌ನ್ನು ತಂದಿದ್ದಾರೆ. ಇದು ನಿನ್ನೆ ವಿಧಾನಪರಿಷತ್ತಿನಲ್ಲಿ ಪಾಸ್ ಆಗಿದೆ. ಬಿ.ಎಸ್.ಪಿ. ಸಭೆಯಲ್ಲಿ ನಾನು ಇದನ್ನು ಬೇಗನೆ ತನ್ನಿ ಏಕೆಂದರೆ 2001ಕ್ಕೆ ಇದರ ಅವಧಿ ಮುಗಿಯುತ್ತದೆಂದು ಹೇಳಿದ್ದೆ. ಆದ್ದರಿಂದ

ಒಂದು ವಾರ ಮೊದಲು ಇದನ್ನು ತಂದಿದ್ದಾರೆ ಕೊನೆಯಪಕ್ಷ ಚರ್ಚೆಯನ್ನಾದರೂ ಮಾಡಬಹುದಾಗಿತ್ತು. ನಮಗೆ ಅಜೆಂಡಾಗಳೇ ಬರುವುದಿಲ್ಲ. ನಾನು ನಿನ್ನೆ ರಾತ್ರಿ ಒಂದು ಪ್ರತಿ ತೆಗೆದುಕೊಂಡು ಹೋಗಿದ್ದೆ. ಇಂಗ್ಲೀಷ್ ಪ್ರತಿಯನ್ನು ಬೆಳಿಗ್ಗೆ ಕೊಟ್ಟರು. ಆದೂ ನಾನು ಬಂದು ಕೇಳಿದಾಗ ಕೊಟ್ಟರು. ಅಷ್ಟೊಂದು ಜರೂರು ಏನಿದೆ ಇದರಲ್ಲಿ ? ನಾವು ಇಲ್ಲಿ ಕಾನೂನು ಮಾಡುವವರು, ಏನೂ ಚರ್ಚೆ ಇಲ್ಲದೆಯೇ ಪಾಸ್ ಮಾಡಿದರೆ ನಾಳೆ ಜನರು ನಮಗೆ ಶಾಪ ಹಾಕಬಾರದು. ನಿನ್ನೆ ಇದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾದಮೇಲೆ ಒಂದೆರಡು ತಿದ್ದುಪಡಿಗೂ ಒಪ್ಪಿಕೊಂಡಿದ್ದಾರೆ. ಆದ್ದರಿಂದ ನಾವು ಇದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಲಿಕ್ಕಾದರೂ ಅವಕಾಶ ಸಿಗಬೇಕಾಗಿತ್ತು. ತರಾತುರಿಯಲ್ಲಿ ಕಾನೂನುಗಳನ್ನು ಪಾಸ್ ಮಾಡಿಕೊಂಡು ಹೋದರೆ ಸದನವೇಕಿರಬೇಕು? ನಾಳೆ ದಿವಸ ಟೆನೆಂಟ್ಸಿ ಇರಬಹುದು, ಮಾಲೀಕ ಇರಬಹುದು, ಶಾಸಕರು ಶಾಸನ ಸಭೆಯಲ್ಲಿ ಏನು ಮಾಡುತ್ತಾರೆ ಎಂದು ಪ್ರಶ್ನೆ ಕೇಳಬಹುದು. ಒಂದು ದಿವಸದಲ್ಲಿ ಪಾಸ್ ಮಾಡಿಕೊಂಡು ಹೋಗಿದ್ದಾರೆಂದು ಎಂದಾಗುತ್ತದೆ. ಏಕೆ. ಚರ್ಚೆಯಾಗಲ್ಲಿಲ್ಲವೆಂಬ ಪ್ರಶ್ನೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :- ಶಾಸನ ಸಭೆ ಶಾಸನ ಮಾಡುವುದಕ್ಕೆ ಹೆಚ್ಚು ಸಮಯವನ್ನು ವ್ಯರ್ಥ ಮಾಡಬೇಕು ಎನ್ನುವುದಕ್ಕೆ ಬದಲಾಗಿ ಶಾಸನ ರಹಿತವಾದಂತಹ ಕಾರ್ಯಕ್ರಮಕ್ಕೆ ಹೆಚ್ಚು ಸಮಯ ವ್ಯರ್ಥವಾಗಿರುವುದರಿಂದ ಇದನ್ನು ತಾವು ಒಪ್ಪಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ :- ನೋಡಿ ನಾವು ಶಾಸನ ಮಾಡುವುದಕ್ಕೂ ಸಮಯ ಕೊಡಬೇಕು. ಅದರ ಬಗ್ಗೆ ಡಿಸ್‌ಕಷನ್ ಆಗಬೇಕು. ಅದೇರೀತಿ ಬೇರೆ ವಿಷಯಗಳ ಬಗ್ಗೆ ಕೂಡ ಇಲ್ಲಿ ಚರ್ಚೆಯಾಗಬೇಕು. ಆದರೆ ನಾನು ಈ ಒಂದು ವಿಧೇಯಕದ ಬಗ್ಗೆ ಮಾತನಾಡುತ್ತಿದ್ದೇನೆ. ಇವತ್ತು ಏನೋ ರೆಂಟ್ ಕಂಟ್ರೋಲ್ ಆಕ್ಟ್‌ಗೆ ಎಲ್ಲೋ ಒಂದು ಅಲ್ಪಸ್ವಲ್ಪ ಅಮೆಂಡ್‌ಮೆಂಟ್ ತಂದಿದ್ದರೆ ನಾವು ಚಿಂತನೆ ಮಾಡುತ್ತಿರಲಿಲ್ಲ. ಆದರೆ ಇವತ್ತು ಅಮೂಲಾಗ್ರವಾಗಿ ಕಾಯಿದೆ ತರುತ್ತಿದ್ದೀರಿ. ಅದೂ ಕೊನೆ ದಿವಸದಲ್ಲಿ. ಇದು ಏಕೆ ಹೀಗೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :- ಇದು ಸ್ವಲ್ಪ ಹೆಚ್ಚಾಗಿದೆ. ಜೊತೆಗೆ ಇದು ಏನಾಗಿದೆ ಎಂದರೆ ಡೆಲ್ಲಿ ಆಕ್ಟ್ ಮಾಡೆಲ್‌ನಲ್ಲಿ ತಂದಿದ್ದೇವೆ. ಮತ್ತು ಬಹಳ ಡಿಟೈಲ್ ಡಿಸ್‌ಕಷನ್ ಮೇಲ್ಮನೆಯಲ್ಲಿ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್ :- ತಮ್ಮ ಎಲ್ಲಾ ಮಾತನ್ನು ಒಪ್ಪಿಕೊಳ್ಳುತ್ತಿದ್ದೇನೆ. ಆದರೆ ಒಂದು ಸಮಸ್ಯೆ ಎಂದರೆ, ಈ ವಿಧೇಯಕವನ್ನು ಕೊನೆ ದಿವಸ ತಂದಿದ್ದೀರಿ, ಅದಕ್ಕೆ ನಮ್ಮ ತಕರಾರು ಇದೆ. ನಮಗೆ ಇದರ ಬಗ್ಗೆ ಸ್ಪಡಿ ಮಾಡುವುದಕ್ಕೆ ಅವಕಾಶ ಕೊಡಬೇಕಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಈ ವಿಧೇಯಕವನ್ನು ವಿಧಾನಪರಿಷತ್ತಿನಲ್ಲಿ ಸ್ವಾಗತ ಮಾಡಿ, ಬಹಳ ಚೆನ್ನಾಗಿ ಬಂದಿದೆ, ಮಾಲೀಕ ಹಾಗೂ ಬಾಡಿಗೆದಾರ ಇಬ್ಬರಿಗೂ ಸಹ ಉತ್ತಮವಾದಂತಹ ವ್ಯವಸ್ಥೆಯಾಗಿದೆ ಎಂದು ಎಲ್ಲರೂ ಸ್ವಾಗತ ಮಾಡಿದರು. ಹಿಂದಿನ ಸರ್ಕಾರದಲ್ಲಿ ಮಾನ್ಯ ಸೋಮಶೇಖರ್‌ರವರು ಈ ಒಂದು ವಿಧೇಯಕವನ್ನು ಸೂಚನೆ ಮಾಡಿ ಕಳೆದ ಬಾರಿ ವಿಧಾನಪರಿಷತ್ತಿನಲ್ಲಿ ಸಹ ಪರ್ಯಾಲೋಚನೆಗೆ ಬಂದಿತ್ತು. ಎರಡು ಸಣ್ಣ ತಿದ್ದುಪಡಿಯೊಂದಿಗೆ ಸರ್ವಾನುಮತದಿಂದ ಆ ಸಭೆಯಲ್ಲಿ ಪಾಸ್ ಮಾಡಿದ್ದಾರೆ. ಇದು ಯಾವುದೂ ಇಲ್ಲಿ ನೀವು ಪುನರ್ ಪರಿಶೀಲನೆ ಮಾಡತಕ್ಕಂಥ ವಿಷಯವಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ನನಗೆ ಮಾನ್ಯ ಶ್ರೀಕಂಠಯ್ಯನವರ ಬಗ್ಗೆ ಗೌರವ ಇದೆ. ಆದರೆ ಆ ಮನೆಯಲ್ಲಿ ಸರ್ವಾನುಮತದಿಂದ ಪಾಸ್ ಮಾಡಿದ್ದಾರೆ, ನೀವು ಚರ್ಚೆ ಮಾಡುವುದು ಬೇಡ, ನೀವು ಒಪ್ಪಿಗೆ ಕೊಡಿ ಎನ್ನುವ ದಾಟಿಯಲ್ಲಿ ಹೇಳುವುದು ಸರಿಯಲ್ಲ.

ಶ್ರೀ ಡಿ.ಬಿ. ಸದಾನಂದಗೌಡ:- ನಮ್ಮ ನಾಯಕರಿಗೆ ಒಂದು ಸಂಶಯ. ಏನೆಂದರೆ ಮೇಲ್ಮನೆಯವರು ಎಲ್ಲಾ ಬುದ್ಧಿವಂತರು. ಕೆಳಗಿನ ಮನೆಯವರು ಅಷ್ಟರ ಮಟ್ಟಿಗೆ ಇದ್ದಾರೋ ಇಲ್ಲವೋ ಎನ್ನುವ ಸಂಶಯ ಇರಬಾರದು ಎಂದು ಹೇಳುವುದಷ್ಟೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ನಾನು ಅವರು ಬುದ್ಧಿವಂತರು, ನೀವು ದಡ್ಡರು ಎಂದು ಹೇಳುವುದಿಲ್ಲ. ಆ ಮಾತು ಇಲ್ಲಿ ಬಂದಿಲ್ಲ. ಅಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಸರ್ವಾನುಮತದಿಂದ ಒಪ್ಪಿದ್ದಾರೆ. ಅವರ ಸ್ವತ: ಅನುಭವಗಳನ್ನು ಇದರಲ್ಲಿ ಏನು ತೊಂದರೆಯಾಗಿದೆ ಎಂದು ಹೇಳಿಕೊಂಡಿದ್ದಾರೆ. ಡೆಲ್ಲಿಯಲ್ಲಿ ಈ ಆಕ್ಟ್‌ನ್ನು ಜಾರಿಗೆ ತಂದು, ಅದು ಹೈಕೋರ್ಟ್‌ಗೂ ಹೋಗಿ ಅಲ್ಲಿ ಸಹ ಇದನ್ನು ಎತ್ತಿ ಹಿಡಿದಿದ್ದಾರೆ. ನೀವು ಯಾವುದಾದರೂ ಸೂಚನೆ ಮಾಡಿದರೆ ಅದನ್ನು ಮುಂದೆ ತರಬಹುದು. ತೊಂದರೆ ಏನಿಲ್ಲ.

ಶ್ರೀ ಡಿ.ಬಿ. ಸದಾನಂದಗೌಡ:- ಮೇಲ್ಮನೆಯಲ್ಲಿ ಪ್ರಮುಖವಾಗಿ ಎರಡು ವಿಚಾರಗಳ ಬಗ್ಗೆ ಚರ್ಚೆಯಾಗಿದ್ದು ತಮಗೆ ಗೊತ್ತಿರಬಹುದು. ಒಂದು ನಿಮ್ಮ ಅಗ್ರಿಮೆಂಟ್ ರಿಜಿಸ್ಟ್ರೇಷನ್ ಮಾಡುವುದರಲ್ಲಿ ಆ ರೆಂಟ್‌ಗಿಂತ ರಿಜಿಸ್ಟ್ರೇಷನ್ ಫೀ ಜಾಸ್ತಿ ಕೊಡಬೇಕಾಗಿರುತ್ತದೆ. ಮತ್ತು ಟೆನೆಂಟ್ ಯಾರಾದರೂ ಎಕ್ಸ್‌ಪೈರ್ಡ್ ಆದರೆ ಅವರ ಮಕ್ಕಳಿಗೆ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಅದು ಎರಡು ಅಮೆಂಡ್‌ಮೆಂಟ್ ಮಾಡಿದ್ದೇವೆ. ಆ ಅಮೆಂಡ್‌ಮೆಂಟ್ ಮಾಡಿರುವುದಕ್ಕೆ ಇವತ್ತು ಒಪ್ಪಿಗೆ ಬಂದಿರತಕ್ಕಂಥಾದ್ದು. ನಿಮ್ಮ ಪಕ್ಷದವರು ಕೊಟ್ಟ ಸಲಹೆಯನ್ನು ಒಪ್ಪಿಕೊಂಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಮ್ಮ ಅಭಿಪ್ರಾಯ ಏನೆಂದರೆ ಈ ರೀತಿಯ ಇನ್ನೂ ಅನೇಕ ಸಲಹೆಗಳನ್ನು ನಾವು ಕೊಡುವುದು ಇದೆ. ಇವತ್ತು ಒಂದೇ ದಿನಕ್ಕೆ ಎರಡು ವಿಷಯಗಳನ್ನು ಹೇಳಿಕೊಂಡು ಮುಂದೂಡಿ ಎಲ್ಲಾ ಬಿಲ್ಲನ್ನು ತರುವುದಕ್ಕೆ ಹೋಗಿದ್ದೀರಿ ಎಂದು ನಮ್ಮ ಪ್ರಶ್ನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಇದರ ಬಗ್ಗೆ ಇನ್ನೂ ಉತ್ತಮವಾದ ಸಲಹೆಗಳನ್ನು ಕೊಟ್ಟರೆ ಪರಿಶೀಲನೆ ಮಾಡಬಹುದು. ತೊಂದರೆ ಏನಿಲ್ಲ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ನಾನು ವಿರೋಧಪಕ್ಷದ ನಾಯಕರ ಅನುಮತಿ ಕೋರಿ, ಅಲ್ಲದೆ ನಾನು ಮೂರು ಗಂಟೆಗೆ ಡೆಲ್ಲಿಗೆ ಹೋಗಬೇಕಾಗಿರುವುದರಿಂದ ಇದರ ಬಗ್ಗೆ ಎರಡು ಮೂರು ಸಲಹೆಗಳನ್ನು ಕೊಡುತ್ತೇನೆ. ಏಕೆಂದರೆ ಈ ಸ್ಕ್ರೂಟಿನಿ ಮಾಡುವಾಗ, ಈ ಬಿಲ್ ತಯಾರಾಗುವಾಗ ಕನ್ನಡದಲ್ಲೆ ಅದು ಇನ್ನೂ ನನ್ನ ಹೆಸರಿನಲ್ಲೆ ಇದೆ. ನಾನು ಹೆಚ್ಚಿಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಒಂದೆರಡು ಮೂರು ವಿಚಾರಗಳು ಬಿಟ್ಟುಹೋಗಿದೆ. ಒಂದನೆಯದಾಗಿ ಹೋಟೆಲ್ ಮತ್ತು ರೆಸಾರ್ಟ್ಸ್, these institutions should also be brought under the purview of the Act. ಈಗ ಹೋಟೆಲ್‌ನಲ್ಲಿ ಬಹಳ ಜನ ಮಿಡ್ಲ್ ಕ್ಲಾಸ್‌ನವರು ಬರುತ್ತಾರೆ. ಮತ್ತು ಹಳ್ಳಿಗಳಿಂದ ಜನರು ಬರುತ್ತಾರೆ. ಹೋಟೆಲ್‌ನವರು ಏನು ರೇಟು ಹಾಕುತ್ತಾರೆ ಅದನ್ನು ಕೊಡಬೇಕಾಗುತ್ತದೆ. ಆದುದರಿಂದ Fair ರೆಂಟ್ ಫಿಕ್ಸ್ ಮಾಡತಕ್ಕಂಥ ಅಧಿಕಾರ ಹೋಟೆಲ್ ಮತ್ತು ರೇಸಾರ್ಟ್‌ಗೆ ಇರಬೇಕಾಗುತ್ತದೆ; ಆದುದರಿಂದ ಮಿಡ್ಲ್ ಕ್ಲಾಸ್ ಪೀಪಲ್ ಮತ್ತು ಸಣ್ಣಸಣ್ಣ ಆಫೀಷಿಯಲ್ಸ್ ಏನು ಬೆಂಗಳೂರಿಗೆ ಮತ್ತು ಮೈಸೂರಿಗೆ ಬರುತ್ತಾರೆ ಅಂತಹವರಿಗೆ ಅನುಕೂಲವಾಗುತ್ತದೆ. ಮತ್ತು ದೊಡ್ಡ ದೊಡ್ಡ ಕಮರ್ಷಿಯಲ್ ಬೆಲ್ಡಿಂಗ್‌ಗೆ ಹಾಕಬೇಕಾಗಿಲ್ಲ. ಇಷ್ಟು ಲಿಮಿಟ್ ಗೋಸ್ಕರ ಪೇ ರೆಂಟ್ ಫಿಕ್ಸ್ ಮಾಡಬೇಕಾಗುತ್ತದೆ. ಅದನ್ನು ಮಾಡಬಹುದು. ಮತ್ತೆ ತಮಗೆ ಗೊತ್ತಿರುವ ಹಾಗೆ ಸರ್ಕಾರದವರು ಯಾವುದೇ ಒಂದು ಪ್ರಾವಿಜನ್ ಇಟ್ಟುಕೊಂಡಿಲ್ಲ. ಸಂಪೂರ್ಣವಾಗಿ ಟೆನೆಂಟ್ಸ್ ಇಟ್ಟುಕೊಂಡಿದ್ದಾರೆ.

ಇದರಲ್ಲಿ ಇಟ್ಟುಕೊಂಡಿರುವ ಪ್ರಕಾರ ಸೋಮಿಯರ್ ಜಸ್ಟೀಸ್ ನೀವು ಮಾಡುವುದಕ್ಕೆ ಆಗುವುದಿಲ್ಲ. ಉದಾಹರಣೆಗೆ ಕೆಲವು ಎಂಪ್ಲಾಯೀಸಿಗೆ ನೀವು ಫ್ಲಾಟ್ಸ್ ಕೊಡಬೇಕಾಗಿರುತ್ತದೆ. ನಿಮ್ಮದೇ ಸ್ವಂತ ಫ್ಯಾಕ್ಟರೀಸಿಗಳು ಇರುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅಷ್ಟೊತ್ತಿಗೆ ಇರುವುದರಿಂದ ದೊಡ್ಡ ಅಧಿಕಾರಿಗಳಿಗೆ ಮತ್ತು ನಮ್ಮಂತಹವರಿಗೆ ಮನೆಗಳು ಯಾವುದೂ ಸಿಗುವುದು ಕಷ್ಟ. ಈ ವಿಚಾರದಲ್ಲಿ ಯಾವ ರೀತಿ ಮಾಡುತ್ತೀರಿ? ಅದಕ್ಕೆ ಏನು ಪ್ರಾವಿಜನ್ ಮಾಡಿದ್ದೀರಿ? ನಾನು ಶೆಲ್‌ನಲ್ಲಿ ಬರೆದಿದ್ದೆ. ಆದರೆ ಅರೆಬರೆಯಾಗಿ ಕೊನೆಯಲ್ಲಿ ಅದನ್ನು ಬಿಟ್ಟು ಸೇರಿಸಿರತಕ್ಕಂಥಾದ್ದು ನಮಗೆ ಗೊತ್ತಿದೆ, ಕೆಲವು ಸಾರಿ ವ್ಯವಸ್ಥೆಯೊಳಗೆ ಮಂತ್ರಿಗಳು ಹೇಳಿದ್ದೇ ಹಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಸಾಮಾಜಿಕ ನ್ಯಾಯ ಒದಗಿಸಿಕೊಡತಕ್ಕಂಥಾದ್ದು ಸರ್ಕಾರದ ಕರ್ತವ್ಯವಾಗಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅಥವಾ ಇನ್ನು ಬೇರೆ ನೌಕರರಿಗೆ ನಿಮ್ಮ ಅಧಿಕಾರಿಗಳಿಗೆ ಮನೆಗಳನ್ನು ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಇಷ್ಟು ಶೇಕಡ ಮನೆಗಳನ್ನು ನಿಮ್ಮ ಸುಪರ್ದಿಗೆ ತಗೆದುಕೊಂಡು ರಿಸ್ಟ್ರಿಬ್ಯೂಟ್ ಮತ್ತು ಅಲಾಟ್ ಮಾಡತಕ್ಕಂಥ ಅಧಿಕಾರವನ್ನು ಸರ್ಕಾರ ಇಟ್ಟುಕೊಂಡರೆ ಆಗ ಅನುಕೂಲವಾಗುತ್ತದೆ. ಅದನ್ನು ತಾವು ಇಟ್ಟುಕೊಳ್ಳಬೇಕೆಂದು ಹೇಳುತ್ತಾ, ನಾನು ನಿಮ್ಮ ಜೊತೆ ಪಾಸಿಟಿಯಾಗಿ ಮಾತನಾಡಿದಾಗ ಇದು ಮತ್ತೆ ಕೌನ್ಸಿಲ್‌ಗೆ ಮಾಹಿತಿ ಹೋಗಬೇಕಾಗುತ್ತದೆ. ಆದುದರಿಂದ ಖಂಡಿತವಾಗಿ ನಾನು ಆರ್ಡಿನೆನ್ಸ್ ಹೊರಡಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಅಲ್ಲಿಗೆ ರೂಲ್ಸ್ ಅಂತು ಫ್ರೇಮ್ ಮಾಡಬೇಕು. Under the rules, we can incorporate. ಆನೂನಿನಲ್ಲಿ ಡಿಸ್ಕ್ರಿಮಿನೇಟ್ ಆಗುತ್ತದೆಂದು ನನ್ನ ಭಾವನೆ.

ಶ್ರೀ ಸೋಮಶೇಖರ್ :— ಸರ್ಕಾರ ಹತ್ತು ಪರ್ಸೆಂಟ್ ಇಪ್ಪತ್ತು ಪರ್ಸೆಂಟ್... if the owners do not inform, the Government, you must be in a position to take over certain buildings. ಆಗ ಅಲಾಟ್ ಮಾಡತಕ್ಕಂಥ ಅಧಿಕಾರ ಆನೂನಿನಲ್ಲಿ ಪ್ರಾವಿಜನ್ ಇರದೆ ರೂಲ್ ಮಾಡುವುದಕ್ಕೆ ಆಗುತ್ತದೆಯೇ? ಈಗ ಕಾನೂನು ಮಂತ್ರಿಗಳು ಆ ಆಕ್ಟ್‌ನಲ್ಲಿ ಇನ್‌ಹೆರಿಸಿಲ್ ತಾವು ಅವಕಾಶ ಇಟ್ಟುಕೊಂಡರೆ ಸರ್ಕಾರ ಇಷ್ಟು ಪರ್ಸೆಂಟೇಜ್ ಮನೆಗಳನ್ನು ತಮ್ಮ ಜವಾಬ್ದಾರಿಗೆ ತಗೆದುಕೊಂಡು ಹಂಚುತಕ್ಕಂಥ ಅಧಿಕಾರ ಆಗ ಸರ್ಕಾರಕ್ಕೆ ಇರುತ್ತದೆ ಎಂದಾಗ ಆಗ ರೂಲ್ಸ್‌ನಲ್ಲಿ ನೀವು ಯಾರ್ಯಾರಿಗೆ ಯಾವ ಪೇಮೆಂಟಿಗೆ ಎಷ್ಟನ್ನು ಕೊಡಬೇಕಾಗುತ್ತದೆ ಎಂದು ರೂಲ್ಸ್‌ನಲ್ಲಿ ಇಟ್ಟುಕೊಳ್ಳಬಹುದು. ಅದುದರಿಂದ ಆಕ್ಟ್‌ನಲ್ಲಿ ಪ್ರಾವಿಜನ್ ಇಲ್ಲ ಎಂದರೆ ಕಷ್ಟವಾಗುತ್ತದೆ. ಆದುದರಿಂದ ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದರೂ ಒಂದು ಆರ್ಡಿನೆನ್ಸ್ ಸೆಷನ್ ಆದಮೇಲೆ ಈ ಬಿಲ್ ತರುತ್ತೇವೆಂದು ಆಶ್ವಾಸನೆ ಕೊಟ್ಟರೆ ಒಳ್ಳೆಯದು. ನನ್ನ ಅನುಭವದಲ್ಲಿ ನಾನು

ಮಂತ್ರಿಯಾಗಿರಲಿ ಏನೇ ಆಗಿರಲಿ ನನಗೆ ಮನೆಯನ್ನು ಸರ್ಕಾರ ಕೊಟ್ಟಿಲ್ಲ. ಸಾಮಾಜಿಕ ನ್ಯಾಯವಾಗಿ ಅದನ್ನು ಕೊಡಬೇಕಾಗುತ್ತದೆ. ಅದನ್ನು ತಾವು ಒಪ್ಪಿಕೊಳ್ಳಿ. ಈ ಎರಡು ಮೂರು ವಿಚಾರಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ ಮಾನ್ಯ ಮಂತ್ರಿಯವರು ಚಿತ್ರದುರ್ಗದಲ್ಲಿ ನಡೆದಂತಹ ಘಟನೆ ಬಗ್ಗೆ ಹೇಳಿಕೆಯನ್ನು ನೀಡುತ್ತಾರೆ.

5. ಮಂತ್ರಿಗಳ ಹೇಳಿಕೆ

ಹೊಳಲ್ಕೆರೆಯಲ್ಲಿ ಹರಿಜನ ಹೆಣ್ಣುಮಗಳ ಮೇಲೆ ಅತ್ಯಾಚಾರವಾಗಿರುವುದರ ಕುರಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ದಿನಾಂಕ: 19.11.2000 ರಂದು ಸಂಜೆ ನಾಲ್ಕು ಗಂಟೆಗೆ ಶ್ರೀಮತಿ ಲಕ್ಷ್ಮಮ್ಮ ಕೋಂ ಶಿವಣ್ಣ ಉಪ್ಪರಿಗೆಹಳ್ಳಿ, ಇವರು ಹೊಳಲ್ಕೆರೆ ಠಾಣೆಗೆ ಹಾಜರಾಗಿ ಒಂದು ದೂರನ್ನು ನೀಡಿರುತ್ತಾರೆ. ದೂರಿನ ಸಾರಾಂಶ ಏನೆಂದರೆ ದಿನಾಂಕ: 18-11-2000ರಂದು ರಾತ್ರಿ ಎಂಟು ಗಂಟೆಗೆ ತಿಪ್ಪೇಸ್ವಾಮಿ ಮತ್ತು ಇತರೆ 30-40 ಜನರು ಅವರ ಮನೆ ಬಾಗಿಲನ್ನು ಮುರಿದು ಅವರನ್ನು ಅಮ್ಮಾಚ್ಚ ಶಬ್ದಗಳಿಂದ ಬಯ್ದು ಜಾತಿ ನಿಂದನೆ ಮಾಡಿ ಕೈಗಳಿಂದ ಹೊಡೆದು ಅವರನ್ನು ಬಲತ್ಕಾರವಾಗಿ ದೇವಸ್ಥಾನಕ್ಕೆ ಎಳೆದುಕೊಂಡು ಹೋಗಿ ದೇವರ ಮುಂದೆ ಪ್ರಮಾಣ ಮಾಡಲು ಬಲವಾಪ್ಯಾಸಿರುತ್ತಾರೆ. ಈ ಜನರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಮ್ಮ ದೂರಿನಲ್ಲಿ ಅವರು ಕೋರಿರುತ್ತಾರೆ. ಈ ದೂರಿನ ಮೇಲೆ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 362:2000 ಕಲಂ 143:47, 323, 354 ಐಪಿಸಿ ಮತ್ತು 301 ಸಿಆರ್ ಪಿಸಿ 10 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ತಡೆ ಕಾಯಿದೆ ಅಡಿಯಲ್ಲಿ ಒಂದು ಪ್ರಕರಣ ದಾಖಲು ಮಾಡಲಾಗಿರುತ್ತದೆ. ಹೊಳಲ್ಕೆರೆ ವಿಭಾಗದ

2.00 ಪಿ.ಎಂ.

ಡಿಎಸ್‌ಪಿಯವರು ಕೇಸಿನ ತನಿಖೆಯನ್ನು ನಡೆಸಿರುತ್ತಾರೆ. ತನಿಖೆಯಿಂದ ಫಿರ್ಯಾದಿ ಸೀರೆಯನ್ನು ಎಳೆದುಕೊಂಡು ಹೋಗುವಾಗ ಕಳಚಿರುತ್ತದೆಂದು ತಿಳಿದಿರುತ್ತದೆ. ವಿಷಯ ತಿಳಿದ ತಕ್ಷಣ ಚಿತ್ರದುರ್ಗ ಎಸ್‌ಪಿಯವರು ಸ್ಥಳಕ್ಕೆ ಭೇಟಿ ನೀಡಿ ತನಿಖೆ ಉಸ್ತುವಾರಿಯನ್ನು ವಹಿಸಿಕೊಂಡಿರುತ್ತಾರೆ. ಆರೋಪಿ ತಿಪ್ಪೇಸ್ವಾಮಿ ಇತರೆ 10 ಜನರನ್ನು ದಸ್ತಗಿರಿ ಮಾಡಲಾಗಿದೆ. ಊರಿನಲ್ಲಿ ಶಾಂತಿ ಭಂಗವಾಗದಂತೆ ಬಂದೋಬಸ್ತ್ ಮಾಡಲಾಗಿದೆ. ಫಿರ್ಯಾದುದಾರರಿಗೆ ಅವಶ್ಯಕ ರಕ್ಷಣೆಯನ್ನು ನೀಡಲಾಗಿದೆ, ಆದಷ್ಟು ಬೇಗ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಲಾಗುವುದು.